# ಪರ್ವತಗಳಲ್ಲಿ ಪರಿಸರ ಶಿಕ್ಷಣ | ಮಾರ್ಘಾ ಫೌಂಡೇಶನ್

ಮಾಧುರ್ಯ ಬಾಲನ್

ನೇಪಾಳದಲ್ಲಿನ ಕಲಿಗಂಡಕಿ ನದಿ ಕಣಿವೆಯ ಮಧ್ಯದಲ್ಲಿರುವ ಬೆರಗುಗೊಳಿಸುವಂತಹ ಸುಂದರ ಹಳ್ಳಿಯಾದ ಮಾರ್ಘಾದಲ್ಲಿ ಜನ ಹೆಚ್ಚಿನ ಸಮಯ ಮನೆಯೊಳಗಿರುವುದು ಸಾಮಾನ್ಯವೇನಲ್ಲ. ಮಾರ್ಘಾ ಹಳ್ಳಿಯಲ್ಲಿ 2016ರಲ್ಲಿ ಆರಂಭವಾದ ರೋಸ್‌ಹಿಪ್ಸ್ ಸೆಂಟರ್ ಫಾರ್ ಕ್ರಿಯೇಟಿವ್ ಲರ್ನಿಂಗ್[1] ಕೇಂದ್ರದಲ್ಲಿ (Rosehips Centre for Creative Learning) ಆರಂಭಿಕ ಕಲಿಕೆಯ ಪದ್ಧತಿಯಲ್ಲಿ ಪರಿಸರ ಶಿಕ್ಷಣ ಮತ್ತು ಶಿಕ್ಷಣದಲ್ಲಿ ಪರಿಸರ ಒಂದು ಪ್ರಮುಖ ಅಂಶವಾಗಿದೆ. ಪ್ರಯೋಗಗಳ ಮೂಲಕ ವಿಷಯಗಳ ಬಗ್ಗೆ ಕುತೂಹಲ, ಮೆಚ್ಚುಗೆ ಮತ್ತು ಬೆರಗು ಮೂಡಿಸುವಂತಹ ರಚನಾತ್ಮಕ ಯೋಜನೆಗಳ ಮೂಲಕ ಕಲಿಯುವ ಕ್ರಮವನ್ನು ದೊಡ್ಡ ಮಕ್ಕಳ ಕಲಿಕೆಯ ಪದ್ಧತಿಯಲ್ಲಿ ಮಾರ್ಘಾ ಫೌಂಡೇಶನ್ ಅಳವಡಿಸಿಕೊಂಡಿದೆ. ಸುತ್ತಲಿನ ಭೌಗೋಳಿಕ ಲಕ್ಷಣಗಳು ಮತ್ತು ಸಾಂಸ್ಕೃತಿಕ ಹಿನ್ನೆಲೆಗಳುಳ್ಳ ವಿಷಯಗಳನ್ನು ಜೋಡಿಸುವುದು, ಸ್ಥಳೀಯ ಸಾಮಗ್ರಿಗಳನ್ನು ಬಳಸುವುದು ಮತ್ತು ತ್ಯಾಜ್ಯವನ್ನು ರಚನಾತ್ಮಕವಾಗಿ ಮರುಬಳಕೆ ಮಾಡುವುದು ಈ ಎಲ್ಲವನ್ನೂ ಒಳಗೊಳ್ಳುವುದು ಪದ್ಧತಿಯ ಭಾಗವಾಗಿದ್ದಿತು. ಫೌಂಡೇಶನ್, ಸುತ್ತಲಿನ ಹಳ್ಳಿಯ ಜೀವನ ಕ್ರಮವನ್ನು ಗೌರವಿಸಿ ಅದರಿಂದ ಸ್ಫೂರ್ತಿ ಪಡೆದಿತ್ತು.

ಒಂದು ಸಣ್ಣ ಚಿತ್ರ ಬರಹವಿದೆ. ಅದರಲ್ಲಿ ಎರಡು ಮೀನಿನ ಮರಿಗಳು ನೀರಿನಲ್ಲಿ ಈಜುತ್ತಿದ್ದು, ಹಿರಿಯ ಮೀನೊಂದನ್ನು ಭೇಟಿ ಮಾಡುತ್ತವೆ. ಆಗ ಹಿರಿಯ ಮೀನು 'ಶುಭೋದಯಗಳು ಮಕ್ಕಳೇ, ನೀರು ಚೆನ್ನಾಗಿದೆಯಾ?' ಎಂದು ಕೇಳುತ್ತದೆ. ಆ ಮೀನಿನ ಮರಿಗಳು ಸುಮ್ಮನೆ ತಲೆ ಅಲ್ಲಾಡಿಸಿ ಮುಂದೆ ಹೋಗುತ್ತವೆ. ಕೆಲವು ಕ್ಷಣದ ನಂತರ ಒಂದು ಮರಿಯು ಮತ್ತೊಂದು ಮರಿಯನ್ನು 'ನೀರು ಎಂದರೆ ಏನು' ಎಂದು ಕೇಳುತ್ತದೆ. ನಮ್ಮ ಸುತ್ತಲಿನ ಸರ್ವೇಸಾಮಾನ್ಯ ಸಂಗತಿಯನ್ನು ನಾವು ಗುರುತಿಸದೇ ಇರುವುದನ್ನು ಈ ಕಥೆಯು ಸೂಚಿಸುತ್ತದೆ. ಉತ್ತಮ ಶಿಕ್ಷಣವು ಮತ್ತೊಂದು ದೃಷ್ಟಿಕೋನದಿಂದ ಗಮನಿಸುವುದನ್ನು ಕಲಿಸುತ್ತದೆ ಮತ್ತು ನಾವು ಹೀಗೇ ಎಂದು ಭಾವಿಸುವ ಎಷ್ಟೋ ವಿಷಯಗಳನ್ನು ಮೆಚ್ಚುವ ಮತ್ತು ವಿಶ್ಲೇಷಣಾತ್ಮಕವಾಗಿ ಗಮನಿಸುವಂತಹ ಸಾಮರ್ಥ್ಯವನ್ನು ನಮ್ಮಲ್ಲಿ ತುಂಬುತ್ತದೆ.

ಮಾರ್ಘಾ ಹಳ್ಳಿಯ ಸುತ್ತಲಿನ ಈ ಅನನ್ಯ ನೈಸರ್ಗಿಕ ಸೌಂದರ್ಯವು ವಿವಿಧ ತಲೆಮಾರಿನೊಂದಿಗೆ ಶಿಕ್ಷಣ, ಮೌಲ್ಯಗಳು ಮತ್ತು ಜೀವನ ಶೈಲಿ ಅಥವಾ ದೈನಂದಿನ ಅಭ್ಯಾಸಗಳನ್ನು ಆಧರಿಸಿ ಅವರ ವಿಶಿಷ್ಟ ಸಂಬಂಧಗಳಿಗೆ ಸ್ಫೂರ್ತಿಯ ಸೆಲೆಯಾಗಿದೆ. ಹಿಂದಿನ ತಲೆಮಾರಿನ ಜೀವನ ಪದ್ಧತಿಯಲ್ಲಿ ಪ್ರಕೃತಿಯೊಂದಿಗಿನ ಸಮತೋಲನವು ಅಡಕವಾಗಿತ್ತು ಮತ್ತು ಹೊರ ಪ್ರಪಂಚದ ಮೇಲಿನ ಅವಲಂಬನೆ ಅಥವಾ ಮಧ್ಯಪ್ರವೇಶ ಅತಿಕಡಿಮೆ ಇತ್ತು. ಭೂಪ್ರದೇಶ, ಋತುಮಾನಗಳು, ಮತ್ತು ಹಳ್ಳಿಯ ಕಾಡಿನ ಅಭ್ಯಾಸಗಳು ಇವುಗಳ ಬಗ್ಗೆ ಆಳವಾದ ಜ್ಞಾನವನ್ನು ಅವರು ಹೊಂದಿದ್ದರು. ಕಾಲ ಸರಿದಂತೆ ರಾಜ್ಯದ ಗಡಿಗಳ ರಚನೆ ಆಯಿತು, ಶಿಕ್ಷಣ, ಸಾರಿಗೆ ಮತ್ತು ಹೊರ ಜಗತ್ತಿಗೆ ಹೆಚ್ಚು ತೆರೆದುಕೊಂಡದ್ದು ಹಾಗೂ ಪ್ರವಾಸಿಗರೊಂದಿಗಿನ ಒಡನಾಟಗಳು ಮುಂತಾದವುಗಳ ಕಾರಣದಿಂದ ಹಿಂದಿನ ತಲೆಮಾರು ಕೂಡ ತಮ್ಮ ಸಾಂಪ್ರದಾಯಿಕ ಜೀವನಶೈಲಿ ಮತ್ತು ಜೀವನೋಪಾಯವನ್ನು ಬದಲಾಯಿಸಿಕೊಳ್ಳಬೇಕಾಯಿತು. ಇದರಿಂದಾಗಿ ಹೋಂ-ಸ್ಟೇಗಳನ್ನು ನಡೆಸುವುದು, ಸೇಬಿನ ತೋಟ ಮಾಡುವುದು, ಗಿಡಮೂಲಿಕೆಗಳನ್ನು ಬೆಳೆಯುವುದು ಇತ್ಯಾದಿಗಳೆಡೆಗೆ ಹೊರಳಿದರು. ಟಿವಿ, ಸಾಮಾಜಿಕ ಮಾಧ್ಯಮಗಳು ಮುಂತಾದವುಗಳ ಮೂಲಕ ಹೊರ ಜಗತ್ತಿಗೆ ತೆರೆದುಕೊಂಡಿರುವ ಹೊಸ ತಲೆಮಾರು ಹೊಸ ಆಕಾಂಕ್ಷೆಗಳನ್ನು ಹೊಂದಿದ್ದು ಅವು ನಿಸರ್ಗ ಕೇಂದ್ರಿತ ಜೀವನ ಕ್ರಮದೊಡನೆ ಅತಿ ಕಡಿಮೆ ಅಥವಾ ಯಾವುದೇ ಬೆಸುಗೆ ಹೊಂದಿಲ್ಲ.

ಪಟ್ಟಣಗಳಲ್ಲಿ ನೆಲೆಸಿರುವ ಕುಟುಂಬಗಳಿಗೂ ಮತ್ತು ಕೃಷಿ ಆಧಾರಿತ ಜೀವನ ನಡೆಸುತ್ತಿರುವ ಕುಟುಂಬಗಳಿಗೂ ನಡುವೆ ಪ್ರಾಬಲ್ಯ, ಗೌರವ, ಹಣ ಮತ್ತು ಅವಕಾಶಗಳ ಲಭ್ಯತೆ ಇವುಗಳಲ್ಲಿರುವ ತಾರತಮ್ಯವು ಬಹಳವಿರುವಾಗ ಈ ವೈರುಧ್ಯವನ್ನು ಸಂಭಾಳಿಸುವುದು ಸುಲಭವೇನಲ್ಲ.

ಫೌಂಡೇಶನ್ ತನ್ನ ಕೆಲಸವನ್ನು ಈ ವೈರುಧ್ಯಗಳ ಆಧಾರದ ಮೇಲೆ ಕಟ್ಟಿಕೊಳ್ಳುತ್ತಾ, ಸ್ಥಳೀಯ ಆಚರಣೆಗಳು ಹೊಂದಿರುವ ಜ್ಞಾನದೊಡನೆ – ಪಾರಂಪರಿಕ ಕೃಷಿ, ಹಬ್ಬಗಳು ಮತ್ತು ತಲೆಮಾರುಗಳ ನಡುವಿನ ಸಂಬಂಧಗಳಲ್ಲಿರುವ ಜ್ಞಾನದೊಡನೆ ಬೆಸೆಯುವ ದಾರಿಗಳನ್ನು ಹುಟ್ಟು ಹಾಕುವುದರಲ್ಲಿ ನಿರತವಾಗಿದೆ. ಸಾಂಪ್ರದಾಯಿಕ ಶಿಕ್ಷಣದಲ್ಲಿ ಇವುಗಳಿಗೆ ಪ್ರಾಮುಖ್ಯತೆಯನ್ನು ನೀಡುವುದಿಲ್ಲ. ಫೌಂಡೇಶನ್ ಮಕ್ಕಳಿಗೆ ಕಲಿಕೆಯಲ್ಲಿ ತಲ್ಲೀನರಾಗುವಂತಹ ಕೆಲವು ಸಾಧನಗಳನ್ನು ನೀಡಿತು, ಉದಾಹರಣೆಗೆ ಜಗತ್ತಿನೆಲ್ಲೆಡೆಯ ಸಚಿತ್ರ ಮಕ್ಕಳ ಪುಸ್ತಕಗಳು, ಪರ್ಯಾಯ ಶಿಕ್ಷಣ ಮಾದರಿಗಳನ್ನು ಬಳಸುವುದರಲ್ಲಿ ಪರಿಣಿತರಾದ ಶಿಕ್ಷಕರು ಮತ್ತು ಸಮಸ್ಯೆ ಪರಿಹಾರವನ್ನು ಬೇಡುವ ಸೃಜನಾತ್ಮಕ ಅಭ್ಯಾಸಗಳು ಮತ್ತು ಕೈಗಳನ್ನು ಬಳಸಿ ಕೆಲಸ ಮಾಡುವುದು ಮುಂತಾದವು.

ಮಾರ್ಹಾ ಹಳ್ಳಿಯಲ್ಲಿ ಮೂಲ ನಿವಾಸಿಗಳು ಮತ್ತು ಇತ್ತೀಚೆಗೆ ವಲಸೆ ಬಂದು ವಸತಿ ಹೂಡಿದ ಸಮುದಾಯಗಳ ನಡುವೆ ಭಿನ್ನತೆಯಿದ್ದು, ಅದು ಗ್ರಾಮದ ಪ್ರಜಾಪ್ರಭುತ್ವ, ಭೂ ಒಡೆತನ ಹಾಗಾಗಿ ಕುಟುಂಬದ ಸಂಪತ್ತು ಇವುಗಳಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಹಬ್ಬಗಳು ಮತ್ತು ಕಾರ್ಯಕ್ರಮಗಳ ಹೊರತಾಗಿ ಹಳ್ಳಿಯಲ್ಲಿ ಸಾಮಾನ್ಯವಾಗಿ, ಸಾಂಸ್ಕೃತಿಕವಾಗಿ ಬೆರೆಯದ ಕುಟುಂಬಗಳ ಈ ಮಕ್ಕಳಿಗೆ ಶಿಶುವಿಹಾರವು ಒಟ್ಟಾಗಿ ಬೆರೆತು ಆಡುವ, ಉಣ್ಣುವ, ಕಲಿಯುವ (ಮತ್ತು ಮಲಗುವ) ಒಟ್ಟಿನಲ್ಲಿ ಎಲ್ಲರೂ ಒಳಗೊಳ್ಳುವ ತಾಣವಾಗಿದ್ದಿತು. ಶಿಶುವಿಹಾರದಲ್ಲಿ ಮೂರು ಹಂತಗಳಿದ್ದವು. ಪ್ಲೇ ಗ್ರೂಪ್, ಎಲ್‌ಕೆಜಿ ಮತ್ತು ಯುಕೆಜಿ. ಅವರ ಕಲಿಕೆಯ ತಾಣಗಳಲ್ಲಿ ಶಿಶುವಿಹಾರದ ಕಟ್ಟಡ, ಉದ್ಯಾನ, ಗ್ರಾಮದ ಹೊಲಗದ್ದೆ, ಸಣ್ಣ ತೊರೆ, ಹಳ್ಳಿಯಲ್ಲಿರುವ ತೋಟಗಾರಿಕಾ ಕೇಂದ್ರ ಮತ್ತು ಹಳ್ಳಿಯ ಬಯಲು ಎಲ್ಲವೂ ಸೇರಿದ್ದವು. ಕೊನೆಯ ಎರಡು ಈ ಪುಟ್ಟ ಮಕ್ಕಳಿಗೆ ದೂರದ ನಡಿಗೆ ಎನಿಸಿ ಅವು ಹೊರಸಂಚಾರ  ಎನಿಸಿಕೊಳ್ಳುತ್ತಿದ್ದವು.

## ಆಟದ ಗುಂಪು

2–3 ವರ್ಷದ ಮಕ್ಕಳ ಈ ಗುಂಪಿನಲ್ಲಿ ಮಣ್ಣಿನಲ್ಲಿ ಆಡುವುದು ಒಂದು ಮುಖ್ಯ ಭಾಗವಾಗಿದೆ. ಯಾವೆಲ್ಲ ಪ್ರಕ್ರಿಯೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಲು ಸಾಧ್ಯವೋ ಅಲ್ಲೆಲ್ಲ ಮಕ್ಕಳನ್ನು ತೊಡಗಿಸಿಕೊಂಡೆವು – ನದಿಪಾತ್ರದಿಂದ ಮತ್ತು ಬೆಟ್ಟದ ತಪ್ಪಲಿನಿಂದ ವಿವಿಧ ಬಗೆಯ ಜೇಡಿಮಣ್ಣನ್ನು ಕಲೆ ಹಾಕುವುದರಿಂದ ಹಿಡಿದು ಅವನ್ನು ಬಳಕೆಗೆ ಸಿದ್ಧಗೊಳಿಸುವವರೆಗೆ. ದೇಹದ ಭಾಗಗಳು, ಕುಟುಂಬದ ಸದಸ್ಯರು, ಬೆಟ್ಟ ಗುಡ್ಡಗಳು ಮತ್ತು ಮರಗಳು ಹೀಗೆ ವಿವಿಧ ವಿಷಯಗಳ ಬಗ್ಗೆ ಮಾತನಾಡಲು ನಾವು ಜೇಡಿ ಮಣ್ಣನ್ನು ಒಂದು ಸಾಧನವಾಗಿ ಬಳಸಿದೆವು. ಮಕ್ಕಳು ಆಲಿಸಲು, ಕಲ್ಪಿಸಿಕೊಳ್ಳಲು ಮತ್ತು ಪ್ರಶ್ನಿಸಲು ಸಹಾಯವಾಗುವ ಹಾಗೆ ವಿವಿಧ ರೀತಿಗಳಲ್ಲಿ ನಾವು ವಿಷಯಗಳನ್ನು ಮಕ್ಕಳಿಗೆ ಪರಿಚಯಿಸಿದೆವು. ಸಂಗ್ರಹಣ ನಡಿಗೆಗಳು (Collection walks) ಅವರ ಕಲಿಕೆಯ ಒಂದು ಮುಖ್ಯ ಭಾಗವಾಗಿವೆ. ಈ ವಯಸ್ಸಿನ ಮಕ್ಕಳು ಸೂಕ್ಷ್ಮ ವಿಷಯಗಳನ್ನು ಗಮನಿಸುತ್ತಾರೆ. ಪದಗಳಿಗೆ ಪೂರ್ವ ಕಲಿಕೆಯು (Pre-verbal learning) ಬೆಳವಣಿಗೆ ಹಂತದಲ್ಲಿ ಒಂದು ಪ್ರಮುಖ ಭಾಗವಾಗಿದ್ದು, ಗಮನಿಸುವಿಕೆ ಮತ್ತು ಸ್ಪರ್ಶಗಳ ಮೂಲಕ ಅತಿ ಹೆಚ್ಚು ಕಲಿಕೆ ಆಗುತ್ತಿರುತ್ತದೆ. ಆಕಾಶ, ಮೋಡಗಳ ಬದಲಾಗುವ ವಿನ್ಯಾಸಗಳು, ಹಳ್ಳಿಯಲ್ಲಿನ ದೊಡ್ಡ ಪ್ರಾಣಿಗಳಾದ ಹಸು, ಕುದುರೆ, ಕತ್ತೆಗಳು ಮುಂತಾದವು ಮಕ್ಕಳ ಕಲಿಕೆಯ ವಿಷಯಗಳಲ್ಲಿ ಸೇರಿದ್ದವು.

## ಎಲ್‌ಕೆಜಿ

3–4 ವಯಸ್ಸಿನ ಮಕ್ಕಳು ತಮ್ಮ ಪದ ಸಂಪತ್ತಿಗೆ ಹೊಸ ಹೊಸ ಪದಗಳನ್ನು ಸೇರಿಸಲು ಸದಾ ಕಾಲ ಉತ್ಸುಕರಾಗಿರುತ್ತಾರೆ, ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತಿರುತ್ತಾರೆ ಹಾಗೂ ಕೆಲವೊಮ್ಮೆ ತಮ್ಮ ಪರಿಶ್ರಮಕ್ಕೆ ತಕ್ಷಣದ ಸಮ್ಮತತೆಯನ್ನು ಬಯಸುತ್ತಿರುತ್ತಾರೆ. ಒಂದು ಕಲಿಕಾ ವಾತಾವರಣದಲ್ಲಿ ಅವರು ತಮ್ಮ ಸುತ್ತಲಿನ ಎಲ್ಲದರೊಡನೆ ಮಾತಿನ ಮೂಲಕ ಸಕ್ರಿಯವಾದ ಸಂಬಂಧ ಬೆಳೆಸುತ್ತಿರುತ್ತಾರೆ ಮತ್ತು ಅದನ್ನು ಗುರುತಿಸುತ್ತಿರುತ್ತಾರೆ.

ಈ ಗುಂಪಿಗೆ ಉದ್ಯಾನವು ಕಲಿಕೆಯ ಒಂದು ಸುಂದರ ತಾಣವಾಗಿದ್ದಿತು. ನಾವು ಅವರನ್ನು ಕೇವಲ ಬೀಜ ಬಿತ್ತಲು, ಸಸಿಗಳನ್ನು ನೆಡಲು ಅಷ್ಟೇ ಬಳಸಿಕೊಳ್ಳದೆ ಅವರ ಆ ಅನುಭವವನ್ನು ಜೀವನಚಕ್ರದ ಪರಿಕಲ್ಪನೆ ಮತ್ತು ಅವರಿಗೆ ಕಾಣುವ ಜೀವಿಗಳಾದ ಎರೆಹುಳಗಳು, ಚಿಟ್ಟೆಗಳು, ಜೇನು ಮತ್ತು ಮಣ್ಣು ಹುಳುಗಳ ನಡುವಿನ ಸಂಬಂಧಗಳ ಬಗ್ಗೆಯೂ ಅರಿತುಕೊಳ್ಳಲು ಬಳಸಿದೆವು. ಮತ್ತು ಇವುಗಳನ್ನು ಬಳಸಿ ಹೊಸ ಪದಸಂಪತ್ತನ್ನು ಮತ್ತು ಸಂಖ್ಯೆಗಳನ್ನು ಹೇಳಿಕೊಡಲು ಬಳಸಿದೆವು.

ಉದಾಹರಣೆಗೆ ನಾವು ಮೊದಲಿಗೆ ಒಂದು ಕಥೆಯ ಮೂಲಕ ಸಾಮಾನ್ಯವಾಗಿ ತಿನ್ನುವ ಸಸ್ಯವನ್ನು ಪರಿಚಯಿಸಿ ಮಕ್ಕಳಿಗೆ ಅದರ ಬಗ್ಗೆ ಅವರು ಏನು ತಿಳಿದಿದ್ದಾರೆ ಎಂಬುದರ ಬಗ್ಗೆ ಪ್ರಶ್ನೆಗಳನ್ನು ಕೇಳಿದೆವು, ಅವರದನ್ನು ಎಲ್ಲಿ ನೋಡಿದ್ದರು, ಅದನ್ನು ಮನೆಯಲ್ಲಿ ಅಡುಗೆಯಲ್ಲಿ ಬಳಸಿದಾಗ ಅವರಿಗೆ ಅದು ಇಷ್ಟವಾಗಿತ್ತೇ ಇತ್ಯಾದಿ. ಋತುಮಾನಕ್ಕೆ ಅನುಸಾರವಾಗಿ ನಾವು ಅದರ ಬೀಜ, ಎಲೆಗಳು, ತರಕಾರಿಗಳು ಅಥವಾ ಹಣ್ಣುಗಳೊಡನೆ ಚಟುವಟಿಕೆಗಳನ್ನು ಮಾಡಿದೆವು. ಇದು ಕರಕುಶಲ, ಅಡುಗೆ, ಚಿತ್ರರಚನೆ, ಅಥವಾ ಹೊಂದಿಸುವ ಚಟುವಟಿಕೆ ಆಗಿರಬಹುದು. ವಿವಿಧ ಬೀಜಗಳನ್ನು ಮೊಳಕೆ ಬರಿಸಲು ಮಕ್ಕಳು ತಮ್ಮದೇ ಬಟ್ಟಲುಗಳನ್ನು ಹೊಂದಿದ್ದರು. ಇದರ ಮೂಲಕ ಅವರಿಗೆ ಕೆಲವು ಬೀಜಗಳು ಮೊಳೆಯಲು ಎರಡು ಮೂರು ವಾರಗಳು ಬೇಕಾಗುತ್ತದೆ, ಆದರೆ ಕೆಲವು ಮೊಳಕೆ ಒಡೆಯುವುದೇ ಕಷ್ಟ ಎಂಬ ಗ್ರಹಿಕೆ ಉಂಟಾಯಿತು. ಎರಡನೆಯದರಲ್ಲಿನ ನಿರಾಶೆಯು ನಂತರ ಇತರೆ ಬೀಜಗಳು ಮೊಳಕೆ ಒಡೆಯುವುದನ್ನು, ಅವುಗಳು ಗಿಡವಾಗುವುದನ್ನು ನೋಡುವುದರ ಆನಂದದ ಮೂಲಕ ತಣಿಯಲ್ಪಟ್ಟಿತು.

## ಯುಕೆಜಿ

4–5 ವಯಸ್ಸಿನ ಸ್ವಲ್ಪ ದೊಡ್ಡ ಮಕ್ಕಳ ಗುಂಪಿನಲ್ಲಿ ಭಾಷಾ ಕಲಿಕೆಯ ಮೇಲೆ ಹೆಚ್ಚು ಗಮನ ನೀಡಲಾಗಿತ್ತು. ಸಾಂಪ್ರದಾಯಿಕವಾಗಿ ಮೊದಲು ನೇಪಾಳಿ ಭಾಷೆಯನ್ನು ಕಲಿತ ನಂತರ ಅವರಿಗೆ ಇಂಗ್ಲೀಷ್ ಭಾಷೆಯನ್ನು ಪರಿಚಯಿಸಲಾಯಿತು.

ಈ ಮಕ್ಕಳ ಕಲಿಕೆಯ ತಾಣಗಳು ಹಳ್ಳಿಯ ಬಯಲು, ಹೊರಸಂಚಾರ ಮತ್ತು ತೋಟಗಾರಿಕಾ ಕೇಂದ್ರದವರೆಗೂ (ಹಳ್ಳಿಯ ಎಲ್ಲರ ಆಡುಮಾತಿನಲ್ಲಿ ಫಾರ್ಮ್ ಎಂದು ಕರೆಯಲ್ಪಡುತ್ತಿದ್ದ) ವಿಸ್ತರಿಸಿದವು. ಈ ತೋಟಗಾರಿಕಾ ಕೇಂದ್ರದಲ್ಲಿಯೇ ಎಲ್ಲ ಹಳ್ಳಿಯವರೂ ಬೀಜಗಳು, ಸಸಿಗಳು

ಮತ್ತು ತರಕಾರಿಗಳನ್ನು ಖರೀದಿಸುತ್ತಾರೆ. ಈ ತೋಟಗಾರಿಕಾ ಕೇಂದ್ರದ ಭೇಟಿಗಳು ಅವರನ್ನು ಕೃಷಿಯ ವಿವಿಧ ಅಂಶಗಳಲ್ಲಿ ತೊಡಗಿಸಿದ್ದಲ್ಲದೇ ತಮ್ಮ ಪೋಷಕರ ಮತ್ತು ಹಿರಿಯರ ವೃತ್ತಿಗೆ ಒಂದು ಸಾಂಸ್ಥಿಕ ಒಪ್ಪಿಗೆಯನ್ನೂ ನೀಡಿ ಗೌರವ ಭಾವನೆಯನ್ನು ಮೂಡಿಸಿದವು.
ಈ ವಯಸ್ಸಿನಲ್ಲಿ ಮಕ್ಕಳು ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಕಾತರರಾಗಿರುತ್ತಾರೆ. ಕೋಳಿ – ಕುರಿಗಳನ್ನು ಸಾಕುವ ಮನೆಗಳಲ್ಲಿನ ಬಹಳಷ್ಟು ಮಕ್ಕಳು ಕೋಳಿ ಮರಿಗಳ ಅಥವಾ ಆಡುಗಳ ಆರೈಕೆ ಮಾಡುವ, ಆಹಾರ ನೀಡುವ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು. ಹಾಗಾಗಿ ಯುಕೆಜಿಯಲ್ಲಿ ಮನೆಗಳ ಭೇಟಿಗಳನ್ನು ಒಂದು ಪ್ರಮುಖ ಕಲಿಕೆಯ ಭೇಟಿಗಳನ್ನಾಗಿ ಯೋಜಿಸಲಾಗಿದ್ದಿತು.

ಹೊಲಗದ್ದೆಗಳೂ ಕಲಿಕೆಯ ಮತ್ತೊಂದು ಪ್ರಮುಖ ತಾಣವಾಗಿದ್ದವು. ಸಾಂಪ್ರದಾಯಿಕ ಸರದಿ ಕೃಷಿ ಪದ್ಧತಿಯನ್ನು ಬಳಸುವ ಒಂದು ಹಳ್ಳಿಯಾಗಿ ವಿವಿಧ ಋತುಮಾನಗಳಲ್ಲಿ ಅಲ್ಲಿನ ಹೊಲಗಳಲ್ಲಿ ನಡಿಗೆಗಳು ಬಣ್ಣಗಳಲ್ಲಿನ ಅದ್ಭುತ ಬದಲಾವಣೆಗಳನ್ನು ಕಣ್ಣಿಗೆ ಕಟ್ಟಿಕೊಡುತ್ತಿದ್ದವು – ಚಿಗುರು ಸಸಿಗಳ ತಾಜಾ ಹಸಿರಿನಿಂದ ಹಿಡಿದು ಬಾರ್ಲಿಯ ರಸವತ್ತಾದ ಚಿನ್ನದ ಬಣ್ಣ, ಹುರುಳಿಯ ಕಣ್ಸೆಳೆಯುವ ನಸುಗೆಂಪು, ಚಳಿಗಾಲದ ಗಾಢಹಸಿರು, ಆಲೂಗೆಡ್ಡೆಯ ಆಕರ್ಷಕ ಚಿಕ್ಕಹೂವುಗಳು ಈ ಎಲ್ಲದರವರೆಗೆ. ಹೊಲಗದ್ದೆಗಳಲ್ಲಿನ ಚಟುವಟಿಕೆ ಮತ್ತು ನಡಿಗೆಯನ್ನು ಮಕ್ಕಳು ಬಹಳ ಆನಂದಿಸುತ್ತಿದ್ದರು. ಅವರ ವೇಳಾಪಟ್ಟಿಯಲ್ಲಿದ್ದ ಮತ್ತೊಂದು ಪ್ರಮುಖ ಭಾಗವೆಂದರೆ ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರ ಪಡೆಯುವ ಚಟುವಟಿಕೆಗಳು ಮತ್ತು ಅಭ್ಯಾಸಗಳು – ಕಂಬಳಿಹುಳ ಹೇಗೆ ಚಿಟ್ಟೆಯಾಗುತ್ತದೆ? ನಾಯಿ ಅಥವಾ ಬೆಕ್ಕು ಹೇಗೆ ಮರಿ ಹಾಕುತ್ತದೆ? ನಾವೇಕೆ ಮೊಟ್ಟೆ ಇಡಲು ಆಗುವುದಿಲ್ಲ? ಇತ್ಯಾದಿ.

## ಉಪಸಂಹಾರ

ಶಿಕ್ಷಕರಾಗಿ ನಮ್ಮ ಮುಖ್ಯ ಗುರಿಯೆಂದರೆ ಮಕ್ಕಳು ಕುತೂಹಲಭರಿತ, ಸ್ಥೈರ್ಯಸ್ಥರಾದ, ಅಭಿವ್ಯಕ್ತಿ ಸಾಮರ್ಥ್ಯವುಳ್ಳ, ಸಂವೇದನಾಶೀಲರಾದ ಮತ್ತು ವಿವೇಕಿಗಳಾದ ತಮ್ಮದೇ ಮುಂದುವರಿದ ಅವತಾರಗಳಾಗಿ ಬೆಳೆಯುವುದು. ಮಾರ್ಫಾದಲ್ಲಿ ಕೆಲಸ ಮಾಡುವಾಗ ನಮ್ಮ ಬದುಕಿನ ಮೂಲ ಬಿಂದುವೆಂದರೆ ಒಬ್ಬರು ಬದುಕುವ ಸ್ಥಳದಲ್ಲಿ ತಾವೂ ಇಲ್ಲಿಯವರೇ ಎಂಬ ಭಾವನೆಯನ್ನು ಬೆಳೆಸಿಕೊಳ್ಳುವುದು ಮತ್ತು ತಮ್ಮ ಸುತ್ತಲಿನದಕ್ಕೆ ಮುಕ್ತ ಸ್ಪಂದನೆಯನ್ನು ಹೊಂದುವುದು. ಉದಾಹರಣೆಗೆ ಅಲ್ಲಿನ ಜೀವಿಗಳು ಮತ್ತು ಋತುಮಾನಗಳು. ನಮ್ಮ ಸಂಸ್ಕೃತಿಯಲ್ಲಿ ವಿವಿಧ ತಲೆಮಾರುಗಳನ್ನು ಬೆಸೆಯುವ ಹಾಗು ಸ್ವಪ್ರಜ್ಞೆ ಮತ್ತು ಸ್ವಂತಿಕೆಗಳನ್ನು ಗಟ್ಟಿಗೊಳಿಸುವ ನೂಲುಗಳಿವೆ. ಪ್ರಕೃತಿಯಿಂದ ಅರ್ಥಪೂರಿತ ಕಲಿಕೆಯನ್ನು ಒಳಗೊಂಡಿರುವ ಶಿಕ್ಷಣವು ನಮ್ಮ ಬದುಕುಗಳನ್ನು ಶ್ರೀಮಂತಗೊಳಿಸುತ್ತದೆ. ಪದಗಳಾಚೆಗೆ ನಮ್ಮ ನೆನಪಿನಲ್ಲಿರುವ ಚಿತ್ರಣಗಳು ಮತ್ತು ಕಾಲದ ವೈಯಕ್ತಿಕ ಗ್ರಹಿಕೆಯು ಮಕ್ಕಳ ಸರ್ವಾಂಗೀಣ ಬೆಳವಣಿಗೆಯನ್ನು ಸುಗಮಗೊಳಿಸುತ್ತವೆ.

ಟಿಪ್ಪಣಿ : ಕೊರೊನಾ ಸಾಂಕ್ರಾಮಿಕವು ಅಪ್ಪಳಿಸಿದ ವರ್ಷವು ಶಿಶುವಿಹಾರಕ್ಕೆ ಬಹಳ ಕಷ್ಟಕರವಾಗಿದ್ದಿತು. ಈ ಮಾದರಿಯು ಹೊರ ಪ್ರಚಂಚದ ಬೆಂಬಲದ ಅಗತ್ಯಗಳಾದ ಅಂದರೆ ಹಣ, ಹಾಗೆಯೇ ಜನರು ಮತ್ತು ಸಂಪನ್ಮೂಲಗಳ ವಿಷಯದಲ್ಲಿ, ಸರ್ಕಾರ ದಿಗ್ಬಂಧನಗಳನ್ನು (ಲಾಕ್ ಡೌನ್) ವಿಧಿಸಿದಾಗ ಫೌಂಡೇಷನ್ ಮತ್ತು ಶಿಶುವಿಹಾರದ ಚಟುವಟಿಕೆಗಳು ನಿಲುಗಡೆಗೆ ಬಂದುಬಿಟ್ಟವು. ಬಹಳ ಕ್ಲಿಷ್ಟಕರವಾದ ಈ ದಿನಗಳಲ್ಲಿ ಗ್ರಾಮ ಸಮಿತಿಯು ಸೆಪ್ಟಂಬರ್ 2020 ರಲ್ಲಿ ಶಿಶುವಿಹಾರವನ್ನು ಮುಚ್ಚುವ ನಿರ್ಧಾರ ತೆಗೆದುಕೊಂಡಿತು.

**ಕೊನೆ ಟಿಪ್ಪಣಿ:**

i http://marphafoundation.org/kindergarten/

ii http://marphafoundation.org/



**ಮಾಧುರ್ಯ ಬಾಲನ್** ಅವರು ದೃಶ್ಯ ವಿನ್ಯಾಸ, ಸುಗಮಗಾರಿಕೆ ಮತ್ತು ಸಂರಕ್ಷಣೆಯ ಶಿಕ್ಷಣದಲ್ಲಿ 10 ವರ್ಷಗಳ ಅನುಭವವನ್ನು ಹೊಂದಿದ್ದಾರೆ. ನೇಪಾಳದಲ್ಲಿ ಮತ್ತು ಭಾರತದ ತಮಿಳುನಾಡು, ಕೇರಳ, ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಇವರು ಕೆಲಸ ಮಾಡಿದ್ದಾರೆ. ಅವರು ಮಕ್ಕಳಿಗೆ ಮತ್ತು ಹಿರಿಯರಿಗೆ ಕಲಿಸುವ ಪದ್ಧತಿಯಲ್ಲಿ ನಾಟಕ, ಚಲನೆ, ಅನುಭವಾತ್ಮಕ ಕಲಿಕೆ ಮತ್ತು ಚಿತ್ರಗಳ ಮೂಲಕ ಕಥೆ ಹೇಳುವುದು ಅಡಕವಾಗಿವೆ. ಅವರ ಸ್ವಾಧ್ಯಾಯವು ಕಲಿಕೆಯ ಆವಿರ್ಭಾವದ ಸುತ್ತ ಇದೆ. ಅವರನ್ನು balan.madhurya@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ದನ ಸಿ.ಎಸ್.** | ಪರಿಶೀಲನೆ: **ಲತಾ ಕೆ.ಸಿ.**